# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕರ್ನಾಟಕ ಕರಾವಳಿ ಮಂಜುಗಡ್ಡೆ ಘಟಕ ಮತ್ತು ಶೈತ್ಯಾಗಾರಗಳು ಬಳಸುವ ವಿದ್ಯುತ್ ಮೇಲೆ ಸಹಾಯಧನ ನೀಡುವ "ಮಂಜುಗಡ್ಡೆ ಸ್ಥಾವರ ಉಪಯೋಗಿಸುವ ವಿದ್ಯುತ್ ಮೇಲೆ ಸಹಾಯಧನ" ಯೋಜನೆಯನ್ನು ಮಾರ್ಪಡಿಸುವಿಕೆ.

ಓದಲಾಗಿದೆ:- (1) ಆದೇಶ ಸಂಖ್ಯೆ:ಪಸಂಮೀ/62/ಮೀಇಯೋ/2010, ದಿನಾಂಕ:09-07-2010.

(2) ಪತ್ರ ಸಂಖ್ಯೆ:ಪಂವಾಯೋ/2/2011-12, ದಿನಾಂಕ:28-04-2012 ಮತ್ತು 27-06-2012.

******

## ಪ್ರಸ್ತಾವನೆ:

ಮೀನುಗಾರಿಕೆಗೆ ಉಪಯೋಗಿಸಲ್ಪಡುವ ಮಂಜುಗಡ್ಡೆ ತಯಾರಿಕಾ ಘಟಕಗಳಿಗೆ ಪ್ರತೀ ಯೂನಿಟ್ ವಿದ್ಯುತ್‌ಗೆ ನೀಡುತ್ತಿರುವ 1 ರೂಪಾಯಿ ಸಹಾಯಧನವನ್ನು ಮುಂದುವರೆಸಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಯವರು 2010-11ರ ಆಯವ್ಯಯ ಭಾಷಣದಲ್ಲಿ ಘೋಷಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, ಕರ್ನಾಟಕದ ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 180ಕ್ಕೂ ಹೆಚ್ಚು ಮಂಜುಗಡ್ಡೆ ತಯಾರಿಕಾ ಹಾಗೂ ಶೈತ್ಯಾಗಾರ ಘಟಕಗಳು ಮೀನುಗಾರಿಕೆ ಉದ್ದೇಶಕ್ಕೆ ಬಳಸುವ ವಿದ್ಯುತ್ ಮೇಲೆ ಪ್ರತೀ ಯೂನಿಟ್‌ಗೆ ರೂ.1.00ರಂತೆ ಘಟಕ ಒಂದಕ್ಕೆ ಗರಿಷ್ಠ ರೂ.2.00 ಲಕ್ಷಕ್ಕೆ ಸೀಮಿತಗೊಳಿಸಿ ಸಹಾಯಧನ ನೀಡುವ ಯೋಜನೆಗೆ ಇಲಾಖಾ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಮಂಜೂರಾತಿ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ:28-04-2012ರ ಪತ್ರದಲ್ಲಿ ಮೀನುಗಾರಿಕೆ ನಿರ್ದೇಶಕರು ಕರ್ನಾಟಕದ ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸುಮಾರು 200ಕ್ಕೂ ಹೆಚ್ಚು ಮಂಜುಗಡ್ಡೆ ತಯಾರಿಕಾ ಹಾಗೂ 35 ಶೈತ್ಯಾಗಾರ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದಲ್ಲಿ ವಿದ್ಯುತ್ ದರ ಕಳೆದ 2 ವರ್ಷದಲ್ಲಿ 3 ಬಾರಿ ಏರಿಕೆಯಾಗಿದ್ದು, ಇದರಿಂದ ಮಂಜುಗಡ್ಡೆ ಉತ್ಪಾದನೆ ದರದಲ್ಲಿ ಸಹ ಏರಿಕೆಯಾಗಿದ್ದು, ಆರ್ಥಿಕ ಸಂಕಷ್ಟದಲ್ಲಿರುವ ಕೆಲವು ಮಂಜುಗಡ್ಡೆ ಘಟಕಗಳು ಮುಚ್ಚುವ ಹಂತದಲ್ಲಿವೆ. ಆದ್ದರಿಂದ, ಸದರಿ ಘಟಕಗಳು ಮೀನುಗಾರಿಕೆ ಉದ್ದೇಶಕ್ಕಾಗಿ ಬಳಸುವ ಪ್ರತಿ ಯೂನಿಟ್ ವಿದ್ಯುತ್‌ಗೆ ಸಹಾಯಧನವನ್ನು ರೂ.1.00 ರಿಂದ ರೂ.2.00ಕ್ಕೆ ಏರಿಸಲು ಹಾಗೂ ಪ್ರತಿ ತ್ರೈಮಾಸಿಕ ಮಿತಿಯನ್ನು ರೂ.1.00 ಲಕ್ಷಕ್ಕೆ ಏರಿಸಿ, ವಾರ್ಷಿಕ ಮಿತಿಯನ್ನು ರೂ.4.00 ಲಕ್ಷಗಳಿಗೆ ಹೆಚ್ಚಿಸಲು ನಿರ್ದೇಶಕರು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಪಸಂಮೀ 116 ಮೀಇಯೋ 2012, ಬೆಂಗಳೂರು ದಿನಾಂಕ:03-09-2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2010-11ನೇ ಸಾಲಿನಿಂದ ಆದೇಶ ಸಂಖ್ಯೆ:ಪಸಂಮೀ/62/ಮೀಇಯೋ/2010, ದಿನಾಂಕ:09-07-2010ರ ಪ್ರಕಾರ ಪ್ರಾರಂಭಿಸಿರುವ "ಮಂಜುಗಡ್ಡೆ ಸ್ಥಾವರ ಉಪಯೋಗಿಸುವ ವಿದ್ಯುತ್ ಮೇಲೆ ಸಹಾಯಧನ" ಯೋಜನೆಯಿಂದ ಕರ್ನಾಟಕದ ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 200ಕ್ಕೂ ಹೆಚ್ಚು ಮಂಜುಗಡ್ಡೆ ತಯಾರಿಕಾ ಹಾಗೂ ಶೈತ್ಯಾಗಾರ ಘಟಕಗಳು ಮೀನುಗಾರಿಕೆ ಉದ್ದೇಶಕ್ಕೆ ಬಳಸುವ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ನೀಡುತ್ತಿದ್ದ ರೂ.1.00ರ ಸಹಾಯಧನ ಮಾರ್ಪಡಿಸಿ ಯೂನಿಟ್ ಒಂದಕ್ಕೆ ರೂ.1.25 ರಂತೆ ಘಟಕ ಒಂದಕ್ಕೆ ಸೀಮಿತಗೊಳಿಸಿದ್ದು, ಸದರಿ ಹೆಚ್ಚಳವು ದಿನಾಂಕ:01-09-2012 ರಿಂದ ಅನ್ವಯವಾಗುವಂತೆ ಆದೇಶ ಸಂಖ್ಯೆ:ಪಸಂಮೀ/62/ಮೀಇಯೋ/2010, ದಿನಾಂಕ:09-07-2010ರಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸಹಾಯಧನ ನೀಡುವ ಯೋಜನೆಗೆ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಇದರಂತೆ ತ್ರೈಮಾಸಿಕ ಮತ್ತು ವಾರ್ಷಿಕ ಮಿತಿಯನ್ನು ಶೇ.25ರಷ್ಟು ಹೆಚ್ಚಿಸಲಾಗಿದೆ.

ಮೇಲ್ಕಂಡ ವೆಚ್ಚವನ್ನು 2012-13ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ-00-110-ಮೀನು ಹಿಡಿಯುವ ದೋಣಿಗಳ ಯಾಂತ್ರೀಕರಣ ಮತ್ತು ಸುಧಾರಣೆ-0-03-ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುಚ್ಛಕ್ತಿ-106-ಸಹಾಯಧನ (ಯೋಜನೆ)" ಅಡಿ ಒದಗಿಸಲಾದ ರೂ.350.00 ಲಕ್ಷಗಳ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಎಫ್‌ಡಿ/252/ವೆಚ್ಚ-4/2012 ದಿನಾಂಕ:23-07-2012 ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ/18/ಪಿಎಫ್‌ಬಿ/2012 ದಿನಾಂಕ:26-05-2012ಗಳಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

3/9/12

(ಡಿ.ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

3/9

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ)(ಎಯು-1 ಮತ್ತು 2), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
5) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4). ವಿಧಾನಸೌಧ, ಬೆಂಗಳೂರು.
6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
7) ಸಮನ್ವಯ/ವಾರಪತ್ರಿಕೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.